# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1306 (1525) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ ಯಿಂದ ಎಷ್ಟು ಎಕರೆ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ; (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕು ಜಾಲ ಹೋಬಳಿಯ ಮತ್ತು ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಪ್ರಾಥಮಿಕ ಅಧಿಸೂಚನೆಯಾಗಿರುವ ಒಟ್ಟು 2535-31 ಎಕರೆ ಪೈಕಿ, 643-04.12 ಎಕರೆ ಅಂತಿಮ ಅಧಿಸೂಚನೆಯಾಗಿದ್ದು, ಡಬ್ಲ್ಯೂ.ಪಿ. ಸಂ: 55330/2024 ಹಾಗೂ ಇತರ ಪ್ರಕರಣಗಳ ಆದೇಶದ ಮೇರೆಗೆ ಪುನರ್ ಪರಿಶೀಲಿಸಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>**ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.** |
| (ಆ) | ಕಳೆದ 3 ವರ್ಷಗಳಿಂದ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಎಷ್ಟು ಎಕರೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ ಮತ್ತು ಅಂತಿಮ ಅಧಿಸೂಚನೆಯಲ್ಲಿ ಎಷ್ಟು ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; | ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಪ್ರಾಥಮಿಕ ಅಧಿಸೂಚನೆಯಾಗಿರುವ ಒಟ್ಟು ವಿಸ್ತೀರ್ಣ: 2438-11 ಎಕರೆ ಪೈಕಿ, 643-04.12 ಎಕರೆ ಅಂತಿಮ ಅಧಿಸೂಚನೆಯಾಗಿದ್ದು, ಡಬ್ಲ್ಯೂ.ಪಿ. ಸಂ: 55330/2024 ಹಾಗೂ ಇತರ ಪ್ರಕರಣಗಳ ಆದೇಶದ ಮೇರೆಗೆ ಪುನರ್ ಪರಿಶೀಲಿಸಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| (ಇ) | ಪ್ರಸ್ತುತ ಬೆಂಗಳೂರು ಜಿಲ್ಲೆಯ ಸುತ್ತಮುತ್ತಲಿನ ಯಾವ ಯಾವ ಜಾಗಗಳಲ್ಲಿ ಎಷ್ಟು ಎಕರೆ ಭೂಸ್ವಾಧೀನ ಮಾಡಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಹಾರ್ಡ್‌ವೇರ್ ಪಾರ್ಕ್ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚುವರಿಯಾಗಿ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ 1 & 3 ಹೋಬಳಿ, ಮೀಸಗಾನಹಳ್ಳಿ, ಬಂಡಿಕೋಡಿಗೆಹಳ್ಳಿ, ಬಾಗಲೂರು ಮತ್ತು ಹೂವಿನಾಯಕನಹಳ್ಳಿ ಒಟ್ಟು 97-20 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ:05.12.2025 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಒಟ್ಟು ವಿಸ್ತೀರ್ಣ: 2438-11 ಎಕರೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. |
| (ಈ) | ಸದರಿ ಭೂಮಿಯ ಪ್ರಸ್ತುತ ಮಾರುಕಟ್ಟೆಯ ಬೆಲೆಯು ಎಷ್ಟು ಪಟ್ಟು ಹಣವನ್ನು ರೈತರಿಗೆ ಭೂ ಮಾಲೀಕರಿಗೆ ನೀಡಲಾಗಿದೆ? (ವಿವರ ನೀಡುವುದು) | ಬಿಕ್ಕನಹಳ್ಳಿ ಗ್ರಾಮದಲ್ಲಿನ ಜಮೀನಿಗೆ ಭೂದರ ನಿರ್ಧರಣಾ ಸಭೆಯಲ್ಲಿ ಪ್ರತಿ ಎಕರೆಗೆ ರೂ.300.00 ಲಕ್ಷ ದರ ನಿಗದಿಪಡಿಸಲಾಗಿರುತ್ತದೆ. ದಿ:19-05-2025ರಂದು ಜರುಗಿದ ಮಂಡಳಿ ಸಭೆಯಲ್ಲಿ ಎಕರೆ ಒಂದಕ್ಕೆ ರೂ.300.00 ಲಕ್ಷ ದರ ಅನುಮೋದನೆಯಾಗಿರುತ್ತದೆ. ಸದರಿ ದರಕ್ಕೆ ಮೌಖಿಕವಾಗಿ ಆಕ್ಷೇಪಣೆ ವ್ಯಕ್ತಪಡಿಸಿ, ಕಡಿಮೆ ಭೂದರವೆಂದು ಭೂಮಾಲೀಕರು ವಿರೋಧಿಸಿರುವ ಹಿನ್ನೆಲೆಯಲ್ಲಿ ಭೂಮಾಲೀಕರ ಕೋರಿಕೆಯಂತೆ ಪರಿಹಾರವನ್ನು ಮರು ನಿಗದಿಪಡಿಸುವ ಬಗ್ಗೆ ಮಂಡಳಿ ಸಭೆಯಲ್ಲಿ ನಿಯಮಾನುಸಾರ ಪರಿಶೀಲಿಸಿ, ತೀರ್ಮಾನಿಸಲಾಗುತ್ತದೆ. |

**ಸಿಐ 179 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡಿರುವ / ಸ್ವಾಧೀನಪಡಿಸಿ ಕೊಳ್ಳುತ್ತಿರುವ ಜಮೀನಿನ ವಿವರವನ್ನು ನೀಡಲಾಗಿದೆ. ಅನುಬಂಧ-1

| ಕ್ರ ಸಂ | ತಾಲ್ಲೂಕು | ಗ್ರಾಮ | ಪ್ರಾಥಮಿಕ ಅಧಿಸೂಚನೆ (ಎ-ಗು) & ದಿನಾಂಕ | ಅಂತಿಮ ಅಧಿಸೂಚನೆ (ಎ-ಗು) & ದಿನಾಂಕ |
|---|---|---|---|---|
| 1 | ಆನೇಕಲ್ | ಬಿಕ್ಕನಹಳ್ಳಿ | 57–00<br>15.03.2024 | 45–20<br>ದಿ:03.10.2024 |
| 2 | ಆನೇಕಲ್ | ಮುತ್ತಾನಲ್ಲೂರು ಅಮಾನಿಕರೆ | 184–36<br>15.03.2024 | 184–31<br>03.10.2024 |
| 3 | ಆನೇಕಲ್ | ಸೊಳ್ಳೇಪುರ | 49–28<br>15.03.2024 | 49–28<br>03.10.2024 |
| 4 | ಆನೇಕಲ್ | ಹಂದೇನಹಳ್ಳಿ | 57–08<br>15.03.2024 | 57–18<br>03.10.2024 |
| 5 | ಆನೇಕಲ್ | ಎಸ್.ಮೇಡಹಳ್ಳಿ | 209–16<br>15.03.2024 | 215–38¾<br>ದಿ:02.12.2024 |
| 6 | ಆನೇಕಲ್ | ಅಡಿಗಾರಕಲ್ಲಹಳ್ಳಿ | 89–20<br>15.03.2024 | 89–29<br>ದಿ:02.12.2024 |
| | | | | ಒಟ್ಟು **643–04.12** |
| 7 | ಆನೇಕಲ್ | ಬಿ.ಹೊಸಹಳ್ಳಿ | 401–19<br>01.10.2024 | ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ. |
| 8 | ಆನೇಕಲ್ | ಮುತ್ತಾನಲ್ಲೂರು ಅಮಾನಿಕರೆ ಹಂದೇನಹಳ್ಳಿ ಸೊಳ್ಳೇಪುರ | 398–35<br>01.04.2025 | |
| 9 | ಆನೇಕಲ್ | ಸಮನಹಳ್ಳಿ ಮುತ್ತನಲ್ಲೂರು ಬಿಕ್ಕನಹಳ್ಳಿ | 491–26<br>07.08.2025 | |
| 10 | ಆನೇಕಲ್ | ಚಿಕ್ಕತಿಮ್ಮಸಂದ್ರ ಕೊಮ್ಮಸಂದ್ರ | 498–23<br>04.08.2025 | |
| 11 | ಯಲಹಂಕ | ಮೀಸಗಾನಹಳ್ಳಿ, ಬಂಡಿಕೋಡಿಗೆಹಳ್ಳಿ ಬಾಗಲೂರು ಮತ್ತು ಹೂವಿನಾಯಕನ ಹಳ್ಳಿ | 97–20<br>05.02.2025 | ಅಂತಿಮ ಅಧಿಸೂಚನೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ದಿ:16.02.2026ರಂದು ಸಲ್ಲಿಸಲಾಗಿರುತ್ತದೆ. |
| | | ಒಟ್ಟು | **2,535–31** | |

ವಿಶೇಷ ಭೂಸ್ವಾಧೀನಾಧಿಕಾರಿ-2